# 1

# ಪೂರೈಸಬೇಕಾದ ವಾಗ್ದಾನಗಳು

## (2 ಕೊರಿಂಥ 1:12-2:4)

*"ನಿಮ್ಮ ಮೇಲೆ ನನಗಿರುವ ಅಧಿಕವಾದ ಪ್ರೀತಿಯನ್ನು ನೀವು ತಿಳುಕೊಳ್ಳಬೇಕೆಂತಲೂ ..." (2:4).*

ಇತ್ತೀಚಿನ ವರುಷಗಳಲ್ಲಿ ಬಹು ಸಂಖ್ಯೆಯ ಸಂಸ್ಥೆಗಳು ಹಗರಣಗಳಲ್ಲಿ ಸಿಲುಕಿ ಕೊಂಡಿರುವದು ನಿಸ್ಸಂಶಯವಾಗಿ ಎಲ್ಲಾ ಸಂಸ್ಥೆಗಳ ಮತ್ತು ಅದರ ನಾಯಕರ ಬಗೆಗೆ ನಂಬಿಕೆಯನ್ನು ಕಳೆದುಕೊಳ್ಳುವಂತೆ ಮಾಡಿದ್ದು ಜನಸಂಖ್ಯೆ ಹೆಚ್ಚಿನ ಭಾಗವಾಗಿದ್ದು ಕಂಡುಬರುತ್ತದೆ. ಸಾರ್ವಜನಿಕವಾಗಿ ಸೇವೆಮಾಡದ ಮನಕೆರಳಿಸುವ ಕಥೆಗಳ ಸರಣಿಗಳ ನಂತರ "ಸಾರ್ವಜನಿಕ ಸೇವಕ" ಎಂಬ ಪದವು ವ್ಯಂಗ್ಯಕ್ಕೆ ಒಳಗಾಗಿದೆ. ಎಲ್ಲಾ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಸ್ವ ಉನ್ನತಿಯನ್ನುಬಯಸುವ ಭ್ರಷ್ಟ ನಾಯಕರಿಂದ ಮತ್ತು ಅವರ ವಂಚನೆಯ ಸ್ವೇಚ್ಛಾಚಾರಕ್ಕೆ ಒಳಗಾಗಿವೆ, ಎಂದು ಹಗರಣಗಳು ಸೂಚಿಸುವುದಿಲ್ಲ. ದುರ್ದೈವಶಾತ್, ಸಂಶಯ ಮತ್ತು ಒಳ್ಳೆತನದಲ್ಲಿ ನಂಬಿಕೆಯಿಲ್ಲದವುಗಳಿಗೆ ಅವುಗಳು ಕಾರಣವಾಗಿದ್ದು, ಪ್ರತಿಯೊಂದು ಸಂಸ್ಥೆಗಳು ಸಾರ್ವಜನಿಕ ತಮ್ಮ ನ್ಯಾಯಬದ್ಧತೆಯನ್ನು ತೋರಿಸುವದು ಅವಶ್ಯವಾಗಿದೆ.

ವಿಶಾಲವಾಗಿ ಹರಡುವ ಅಪನಂಬಿಕೆಯು ಸಹಜವಾಗಿ ಸಭೆಯ ಜೀವಿತದಲ್ಲಿ ಒಂದು ಅಂಶವಾಗಿಬಿಟ್ಟಿದೆ. ಅಧಿಕೃತವಾದ ಸೇವೆಯನ್ನು ನಿರ್ಣಯಿಸುವ ತಾತ್ವಿಕ ಅಂಶಗಳನ್ನು ಮಾತ್ರ ನಾವು ಎದುರಿಸುವುದಿಲ್ಲ. ಅದೇ ಸಮಯದಲ್ಲಿ ಆದರ್ಶ ಸೇವೆಯ ಮಾದರಿಯನ್ನು ಕಂಡುಕೊಳ್ಳುವುದು ಮಾತ್ರವೇ ನಮ್ಮ ಕೆಲಸವಲ್ಲ. ಸಭೆಯಲ್ಲಿ ಪಾಲ್ಗೊಳ್ಳುವ ವಿವಿಧ ಬಗೆಯ ಸೇವೆಗಳಲ್ಲಿ ಪ್ರಾಮಾಣಿಕತೆಯನ್ನು ಪ್ರಯೋಗಿಸುವದು ಅವಶ್ಯವಾಗಿದೆ. ಈ ದಿನಗಳಲ್ಲಿ ಪ್ರಚಲಿತವಿರುವ ಅಪನಂಬಿಕೆಯ ಸಭೆಯ ಪ್ರತಿಯೊಂದು ನಿರ್ಧಾರಗಳನ್ನು ಮತ್ತು ಕಾರ್ಯಕ್ರಮಗಳನ್ನು ಪರೀಕ್ಷಿಸಲು ಕಣ್ಣನ್ನೂ ಮತ್ತು ಕಿವಿಯನ್ನೂ ನಮಗೆ ಕೊಟ್ಟಿರುವದು ಸ್ವ ಅಭಿವೃದ್ಧಿಯ ಸಂಕೇತವಾಗಿದೆ.

ಸಾಮಾನ್ಯವಾದ ಟೀಕೆ ಎಂದರೆ ದೇವರಿಗೋಸ್ಕರ ಮಾತನಾಡುವವರು ಮತ್ತು "ಹೊಸ ಸೃಷ್ಟಿಗಳು" (5:17) ಎಂದು ಹೇಳಿಕೊಳ್ಳುವವರು ಇತರರಿಗಿಂತ ಭಿನ್ನವಾಗಿಲ್ಲ. ಕ್ರಿಸ್ತೀಯ ಜೀವಿತದ ಬಗೆಗಿನ ಮತ್ತು ಒಬ್ಬನ ಸೇವೆಯ ಸ್ಥಳದ ಬಗೆಗಿನ ಮಹತ್ವದ ನಿರ್ಧಾರಗಳು ಲೌಕೀಕ ಅಳತೆಗೋಲಿನ ಆಧಾರದ ಮೇಲೆ ಲೆಕ್ಕಹಾಕಿ ಮಾಡಲಾಗಿರುತ್ತದೆ. ತಮ್ಮ ಸಾಧನೆಗೆ ಯಾವ ಗುಂಪು ಉತ್ತಮವಾಗಿದೆ ಎಂದು ಕೇಳಿ ಆ ಮೂಲಕ ಕೆಲ ಕ್ರೈಸ್ತರು ಸೇವೆಯನ್ನು ಮಾಡಲು ಒಂದು ಸ್ಥಳವನ್ನು ಆಯ್ದುಕೊಳ್ಳುತ್ತಾರೆ. ಜಗತ್ತು ಉಪಯೋಗಿಸುವ ಮಟ್ಟಗಳನ್ನು ನಾವು ಸಭೆಯ ನಾಯಕರನ್ನು ಆರಿಸಿವಾಗ ಬಳಸುತ್ತೇವೆ. ಅಪನಂಬಿಗಸ್ತರ ಪ್ರಕಾರ ಸೇವಕನು ಮಾರಾಟಕ್ಕಿರುತ್ತಾನೆ; ಆತನು ತನ್ನ ಪ್ರಗತಿ ಮನ್ನಣೆಗಾಗಿ ಯಾವಾಗಲೂ ಒಂದು ಸೇವೆಯಿಂದ ಮತ್ತೊಂದು ಸೇವೆಗೆ ತಿರುಗಿಕೊಳ್ಳುವುದಕ್ಕೆ ಸದಾ ಸಿದ್ಧನಾಗಿರುತ್ತಾನೆ.

ಅಪನಂಬಿಗಸ್ತರು ನಿಶ್ಚಿತವಾಗಿ, ಯಾವಾಗಲೂ ಸರಿಯಾದ ಮಾರ್ಗದಲ್ಲಿರುವುದಿಲ್ಲ. ನಮ್ಮ ನಿರ್ಧಾರಗಳನ್ನು ಮಾಡುವಾಗ ನಾವು ಯಾವಾಗಲೂ ಲೌಕೀಕ ಪರಿಣಾಮ

ಗಳನ್ನು ಬಳಸುವುದಿಲ್ಲ. ಆದರೆ ಲೌಕೀಕವಾದ ಅಂಶಗಳು ಸಭೆಯ ಸೇವೆಯನ್ನು ಮತ್ತು ಅದರಲ್ಲಿರುವ ನಮ್ಮ ಸ್ಥಾನವನ್ನು ಸಂಸ್ಥಾಪಿಸುವುದಕ್ಕೆ ಪದೇ ಪದೇ ಬಳಸುವಂತೆ ನಮ್ಮನ್ನು ಕೆರಳಿಸುವಂತದ್ದಾಗಿವೆ. ನಾವಿರುವಂತಹ ಈ ಪೀಳಿಗೆಯು ಅಂದರೆ "ನನ್ನ ಪೀಳಿಗೆಯು" ನಮ್ಮ ಸ್ವಂತದ ಅಭಿವೃದ್ಧಿಯೆಡೆಗೆ ಮೊದಲು ಗಮನ ಕೊಡುವ ಶೋಧನೆಗೆ ಆಹ್ವಾನವನ್ನು ಕೊಡುವುದಾಗಿದೆ. ನಿಸ್ಸಂಶಯವಾಗಿ, ಅಪನಂಬಿಗಸ್ತರು ಕೆಲಸಾರಿ ಸರಿಯಾದ ಮಾರ್ಗದಲ್ಲಿರುತ್ತಾರೆ.

ಈ ದಿನಗಳಲ್ಲಿ ಸಾಮಾನ್ಯವಾಗಿ ಮಾಡುತ್ತಿರುವ ಎಲ್ಲಾ ಟೀಕೆಟಿಪ್ಪಣೆಗಳಿಗೆ ಎರಡನೆಯ ಕೊರಿಂಥ ಪತ್ರಿಕೆಯು ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಪೌಲನು ತಾನು ಸಂಸ್ಥಾಪಿಸಿದ ಸಭೆಯಲ್ಲಿ ರಕ್ಷಣಾತ್ಮಕವಾಗಿ ನಿಂತುಕೊಳ್ಳುವ ಪ್ರಸಂಗವು ಘೋರವಾದದ್ದು ಮತ್ತು ಅವರ ಅಪಾದನೆಗಳಿಗೆ ಉತ್ತರ ಕೊಡುವದೂ ಹಾಗೂ ಕ್ರಿಸ್ತನು ತನ್ನೊಳಗೆ ಮಾತನಾಡಿದ್ದಾನೆ ಎಂಬುದಕ್ಕೆ ಸಾಕ್ಷಿಯನ್ನೂ ಕೊಡುವ ಅವಶ್ಯಕತೆಯೂ ಆತನಿಗೆ ಇತ್ತು (13:3) ಈ ಪುಸ್ತಕದ ಬಗೆಗೆ ಇರುವ ಒಂದು ಗುರುತರವಾದ ಅಂಶ ಎಂದರೆ ಆತನು ಅವರ ಅಪಾದನೆಗಳಿಗೆ ಎಚ್ಚರಿಕೆಯಿಂದ ಉತ್ತರಿಸುತ್ತಿದ್ದನು ಯಾಕೆಂದರೆ ಇದು ಆತನು ಮಾತ್ರ ಪ್ರಮಾಣಿಕವಾಗಿ ನಡಕೊಂಡರೆ ಮಾತ್ರ ಸಾಲದು; ನಾವು ಪ್ರಾಮಾಣಿಕರಾಗಿದ್ದೇವೆ ಎಂದು ಇತರರೂ ತಿಳಿದುಕೊಳ್ಳುವ ರೀತಿಯಲ್ಲಿ ಆತನು ಜೀವಿಸಬೇಕಾಗಿತು (ಹೋಲಿಸು 1:13, 14; 13:6).

## ಪ್ರಮುಖವಾದ ಸಂಗತಿ ಸಂದೇಶ ವಾಹಕನು

ಪೌಲನ ಪತ್ರ ಬರೆಯುವಿಕೆಯ ಸಾಮಾನ್ಯ ಅಭ್ಯಾಸವು ತಾನು ಯಾವುದಕ್ಕೋಸ್ಕರ ಪತ್ರವನ್ನು ಬರೆಯುತ್ತಿದ್ದೇನೆ ಎಂಬ ಪ್ರಮುಖ ಕಾಳಜಿಯನ್ನು ಸೂಚಿಸುತ್ತದೆ. ಆತನ ಪತ್ರಗಳು ನಿಖರವಾದ ಸಮಸ್ಯೆಗಳಿಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ಬರೆಯಲ್ಪಟ್ಟವುಗಳಾಗಿವೆ. ಸಾಮಾನ್ಯವಾಗಿ, ಪ್ರಮುಖವಾದ ಕಾಳಜಿಯು ವಂದನಾರ್ಪಣೆಯ (ಅಥವಾ ಆಶೀರ್ವಾದದ) ಭಾಗದ ನಂತರದ ಸ್ಥಳವನ್ನು ಪಡೆಯುವವುಗಳಾಗಿದೆ. 2 ಕೊರಿಂಥದಲ್ಲಿ 1:12-14ರಲ್ಲಿನ ಈ ತರದ ಪ್ರಮುಖವಾದ ಕಾಳಜಿಯು ಇಡೀ ಪತ್ರಿಕೆಯ ಬೆಳವಣಿಗೆಗೆ ನಾಂದಿ ಹಾಡಿದೆ. 2 ಕೊರಿಂಥದಲ್ಲಿರುವ ಸಂಗತಿಗಳು, ಈ ವಚನಗಳು ತೋರಿಸುವಂತೆ, ಇವುಗಳು ಅಪೋಸ್ತಲರ ನಡತೆಯಾಗಿವೆ. "ನಾವು ಈ ಲೋಕದಲ್ಲಿ ... ನಡೆಯುವವರಾಗಿದ್ದೇವೆ" (1:12) ಎಂದು ಸಮರ್ಥಿಸಿಕೊಳ್ಳಲು ಪೌಲನು 2 ಕೊರಿಂಥದವರಿಗೆ ಬರೆದ ಪತ್ರಿಕೆಯನ್ನು ಬರೆದನು. 1:12-14ರಲ್ಲಿನ ಸಂಗತಿಗಳು ಪೌಲನ ವೈಯಕ್ತಿಕ ನಡತೆಯ ಮೇಲಿನ ದಾಳಿಯನ್ನು ಸೂಚಿಸುವುದಾಗಿದೆ. ಆತನ ಓದುಗರು ಇದನ್ನು "ಅರ್ಥೈಸಿಕೊಳ್ಳಬೇಕು" ಎಂದು ಆತನು ಬಯಸುವವನಾಗಿದ್ದಾನೆ (1:13).

"ಒಂದು ಸಂಗತಿಯ ಬಗೆಗೆ ನಮಗೆ ಹೆಮ್ಮೆಯುಂಟು" ಎಂದು ಪೌಲನು ಹೇಳಿದನು (1:12). "ಹೆಮ್ಮೆ" ಎಂಬ ಪೌಲನ ಪದಗಳಲ್ಲಿ ಸಾಮಾನ್ಯವಾಗಿ ನಕಾರಾತ್ಮಕವಾಗಿ "ಜಂಬಕೊಚ್ಚಿಕೊಳ್ಳುವವ" ಎಂಬುವುದನ್ನು ಸೂಚಿಸುವುದಾಗಿದೆ. ಈ ಪದವು ಸಾಮಾನ್ಯವಾಗಿ ಒಬ್ಬನು ದೇವರ ಪಾತ್ರವನ್ನು ಬಿಟ್ಟುಬಿಟ್ಟು ತನ್ನ ಕಾರ್ಯದ ಬಗೆಗೆ ಜಂಬಕೊಚ್ಚಿಕೊಳ್ಳುವ ವಿಚಾರವನ್ನು (ಹೋಲಿಸಿ ರೋಮಾಪುರ 3:27; 4:2) ಪ್ರಕಟಿಸುವುದಾಗಿದೆ. 2 ಕೊರಿಂಥದಲ್ಲಿ, ಈ ಪದಕ್ಕೆ ವಿಶೇಷಾರ್ಥವು ಇದ್ದು. ಪೌಲನ ವಿರೋಧಿಗಳು ತಮ್ಮ ಕಾರ್ಯಗಳಿಗಾಗಿ ಜಂಬಕೊಚ್ಚಿಕೊಳ್ಳುತ್ತಿದ್ದುದರಿಂದ ಅವರಿಗೆ ಹೋಲಿಸಿಕೊಳ್ಳುತ್ತಾ ತಾನು ಬಡ ಅಪೊಸ್ತಲನು ಎಂದು ಪೌಲನು ತನ್ನನ್ನು ಸೂಚಿಸುತ್ತಾನೆ (ಹೋಲಿಸಿರಿ 5:12; 10:13, 17). ಅವರ ಜಂಬಕೊಚ್ಚಿಕೊಳ್ಳುವಿಕೆಯು ಮಾನವ ಮಟ್ಟಕ್ಕೆ ಅನುಗುಣವಾಗಿದೆ.

ಹೇಗೋ, ಅಲ್ಲೊಂದು ಸಮರ್ಥಿಸಿಕೊಳ್ಳಬಹುದಾದ ಜಂಬಕೊಚ್ಚಿಕೊಳ್ಳುವಿಕೆಯು

ಉಂಟು ಹೋಲಿಸಿ (1 ಕೊರಿಂಥ 1:31) ಅದು "ಕರ್ತನಲ್ಲಿ" ಮತ್ತು ಕರ್ತನ ಮುಂದೆ ಅದರ ಋಣಬದ್ಧತೆಯನ್ನು ಗುರುತಿಸುವದೇ ಆಗಿದೆ. "ಜಂಬಕೊಚ್ಚಿಕೊಳ್ಳುವಿಕೆ" ಇರುವ ಪದಗಳು ಒಬ್ಬನ ಕಾರ್ಯದಲ್ಲಿ "ಗರ್ವಪಡುತ್ತಾ" ಇರುವುದಕ್ಕೆ ಬಳಸುವಂತವುಗಳು ಆಗಿವೆ. ಪೌಲನು ರೋಮನ್ನರಿಗೆ ಬರೆದ ಪತ್ರಿಕೆಯಲ್ಲಿ "ದೇವ ಸೇವೆಯಲ್ಲಿ ಹೊಗಳಿ ಕೊಳ್ಳುವುದಕ್ಕೆ ಕ್ರಿಸ್ತ ಯೇಸುವಿನಲ್ಲಿ ನನಗೆ ಕಾರಣವುಂಟು" ಎಂದು ಹೇಳುತ್ತಾನೆ (ರೋಮಾಪುರ 15:17). 2 ಕೊರಿಂಥದಲ್ಲಿ, ಆತನು ಯಾವುದನ್ನು "ಹೊಗಳಿಕೊಳ್ಳು ವುದಕ್ಕೆ ತೆಗೆದುಕೊಂಡಿದ್ದನೋ" ಅದೇ ಕಾರ್ಯಗಳನ್ನು ಪುನರುಚ್ಚರಿಸುತ್ತಾ ಪದೇ ಪದೇ ಇತರರನ್ನು ಹೊಗಳುತ್ತಾ ಪ್ರತಿಕ್ರಯಿಸುತ್ತಿದ್ದಾನೆ (10:16; 12:1, 9). ಪೌಲನ ಪ್ರಕಾರ ಒಬ್ಬನು ಇನ್ನೊಬ್ಬರ ಬಗೆಗೆ "ಹೊಗಳಬಹುದು" 7:4ರ ಪ್ರಕಾರ ಆತನು ತಾನು ಸಂಸ್ಥಾಪಿಸಿದ ಸಭೆಯಲ್ಲಿ "ಮಹಾ ಹೊಗಳಿಕೆಯನ್ನು" ಹೊಂದಬೇಕಿತ್ತು (ಹೋಲಿಸಿ 9:2). ಬದಲಾಗಿ, ಪೌಲನು ತಾನು ಯಾವುದನ್ನು "ಹೊಗಳಿಕೊಳ್ಳು ವವನಾಗಿದ್ದಾನೆ" ಎಂದು ಹೇಳುತ್ತಾ 1:12ರಲ್ಲಿರುವ ಪ್ರಕಾರ ತನ್ನ ಓದುಗರು ಆತನ ಬಗೆಗೆ "ಹೆಮ್ಮೆಪಡುವವರಾಗಿ" ಇರಬೇಕು ಎಂದು ಹೇಳುತ್ತಾನೆ. ಈ ಸಂಗತಿಯು ಕ್ರೈಸ್ತನ ನಿಜವಾದ ಸೇವಕನ ನಡತೆಯ ಒಂದು ಲಕ್ಷಣದಂತೆ ತೆಗೆದುಕೊಳ್ಳಬಹುದು. ಪೌಲನ ಸೇವೆಯ ಆತನಿಗೆ ನ್ಯಾಯ ಸಮ್ಮತವಾದ ಕ್ರಿಸ್ತನ ಸೇವಕನಾಗಿರುವಂತೆ "ಆಜ್ಞಾಪಿಸಿದಂತಹ" (6:4) 2 ಕೊರಿಂಥದ ಪೌಲನ ತನ್ನ ಸೇವೆಯ ಕುರಿತಾಗಿ ಬರೆದ ಜ್ಞಾಪಕ ಪತ್ರಗಳಂತಿದೆ.

2 ಕೊರಿಂಥವು ಪೌಲನಿಂದ ಅಪೂರ್ವ ಮೊತ್ತದ ಆತ್ಮಚರಿತ್ರೆಯ ವಿವರಣೆ, ಎಂದು ವರ್ಣಿಸಲ್ಪಟ್ಟಿದೆ ಮತ್ತು ಇದರಲ್ಲಿ ಹೆಚ್ಚಾಗಿ ಕಂಡುಬರುವ ಹೊಗಳಿಕೊಳ್ಳುವಿಕೆಯು ಸ್ವರಕ್ಷಣೆಗೆಂದು ಮಾಡಿದ್ದಾಗಿದೆ (ಹೋಲಿಸಿ 6:1-10; 11:23-33). ನಮ್ಮ ಸ್ವಾಭಾವಿಕವಾದ ಪ್ರತಿಕ್ರಿಯೆಯು ಯಾವುದೇ ರೀತಿಯ ಹೊಗಳಿಕೊಳ್ಳುವಿಕೆಯ ಜೊತೆ ಯೋಗ್ಯವಾಗಿ ಕಾಣುವುದಿಲ್ಲ. ನಮ್ಮ ವಿಶ್ವಾಸವನ್ನು ಸಂಸ್ಥಾಪಿಸುವಂಥ ವಿವರಗಳನ್ನು ಸ್ಮರಿಸುವುದಕ್ಕಾಗಿ ಅಲ್ಲೊಂದು ಸ್ಥಳವು ಇದೆ ಪೌಲನ ಅನುಭವವು ಸೂಚಿಸುವುದಾಗಿದೆ. ನಮ್ಮ ಸ್ವಂತ ಅನುಭವಕ್ಕಿಂಥ ವೈಯಕ್ತಿಕ ನಿಬಂಧನೆಗಳು ಮತ್ತು ಯಾರು ತಮ್ಮ ಇತಿಹಾಸವನ್ನು ಸ್ಮರಿಸುತ್ತಿರುವ, ಇತರರದನ್ನು ಕೇಳುತ್ತಾ ನಾವು ಮಾತನಾಡದೇ ಮೌನವಾಗಿರಬೇಕು. ಆದರೆ ನಾವು ಆಯಾಸಗೊಳ್ಳಬಾರದು ಮತ್ತು ನಮ್ಮ ಸೇವೆಯ ಬಗೆಗೆ ಔದಾಸೀನ್ಯ ತಾಳುವವರೂ ಆಗಿರಬಾರದು ಎಂಬುದನ್ನು ಪ್ರಾತ್ಯಕ್ಷತೆ ಮಾಡಿತೋರಿ ಸುವಿಕೆಯು ಅವಶ್ಯವಿದೆಯೆಂದು ಪೌಲನ "ಹೊಗಳಿಕೆಯು" ನೆನಪಿಸುವುದಾಗಿದೆ. ನಮ್ಮ ಕಾರ್ಯದಲ್ಲಿ "ಹೊಗಳಿಕೊಳ್ಳುವದು" ನಿಖರವಾದ ಕಾರ್ಯಗಳಲ್ಲಿ ಎಂದು ನಾವು ತೋರಿಸಬೇಕಾಗಿದೆ.

"ಲೌಕಿಕ" ಸಂಗತಿಗಳು ಒಬ್ಬನ ನಡತೆಯನ್ನು ನಿರ್ಧರಿಸುತ್ತದೆ ಎಂಬ ಕ್ರೈಸ್ತರ ಮೇಲಿನ ಸಾಮಾನ್ಯ ಆರೋಪಕ್ಕೆ ಪೌಲನು ಉತ್ತರಿಸಬೇಕಾಗಿದೆ. ಆತನು "ಮಾನುಷ ಜ್ಞಾನ"ದ (1:12) ಜೊತೆ ನಡೆಯುವುದನ್ನು ಆತನು ನಿರಾಕರಿಸಿದನು. "... ಕೇವಲ ಮನುಷ್ಯ ಬುದ್ಧಿ ಯಿಂದ ಯೋಚಿಸಿ ಅನ್ನುವವನಾಗಿದ್ದೇನೋ? ಎಂದು ಆತನು ಕೇಳುತ್ತಾನೆ" (1:17). ಈ ಸಮರ್ಥನೆಯ ಹಿಂದೆ ಆತನು ಮಾಡುವ ಆಪಾದನೆಗಳು ಮತ್ತು "ಮಾನುಷಬುದ್ಧಿಯ (5:16) ಪ್ರಕಾರ ನಡೆದುಕೊಳ್ಳುವಿಕೆಗಳು," ಇವು "ಹೊಸ ಸೃಷ್ಟಿಗಳ" ಹಾಗೆ ಅಲ್ಲ (5:17) ಆದರೆ ಆತನು ಆತ್ಮನ ವರಗಳ ಮೂಲಕ ಜೀವಿಸುವವನು ಆಗಿದ್ದಾನೆ. ಮಾನುಷ ಬುದ್ಧಿಯು (1:12, 17; 5:16) ಪೌಲನ ಜೀವಿತದಲ್ಲಿ ಆಳಿತು ಎಂದು ಕೆಲವರು ಹೇಳುತ್ತಾರೆ. ಆತನ ಪ್ರತಿವಾದಿ ಗಳು ಆತನು ಯಾರೋಬ್ಬರಗಿಂತಲೂ ಭಿನ್ನವಾಗಿರಲಿಲ್ಲ ಮತ್ತು ಆತನು ಎಲ್ಲರಂತೆ ಉದ್ದೇಶ ಪೂರ್ವಕವಾದಂತಹ ಸ್ವಾರ್ಥಿಯೂ ಆಗಿದ್ದನು ಎಂದು ಆಪಾದಿಸುವವರಾಗಿದ್ದಾರೆ.

ಆ ಹಿನ್ನಲೆಯ ವಿರುದ್ಧ, ಪೌಲನು ತಾನು ಆತ್ಮೀಕ ಮನುಷ್ಯನಂತೆ ವರ್ತಿಸಿದ್ದಾಗಿಯೂ, ಮತ್ತು ಆ ನಡಕೊಳ್ಳುವಿಕೆಯು "ಪರಿಶುದ್ಧತೆ ಮತ್ತು ದೈವೀಕ ಪ್ರಾಮಾಣಿಕತೆ"ಯ

ಜೊತೆಯಾಗಿತ್ತು ಎಂದು ವಾದಿಸುವವನಾಗಿದ್ದಾನೆ. ಈ ಸಂಗತಿಯು ನಿಜವಾಗಿಯೂ ಮಹತ್ವದ್ದಾಗಿದ್ದು ಪೌಲನಿಗಾಗಿ 2:17ರಲ್ಲಿ ಆತನು ತನ್ನ ಜೀವಿತದಲ್ಲಿ ಪ್ರಾಮಣಿಕತೆಯನ್ನು ಆಚರಿಸಿದಂತಹದನ್ನು ಸೂಚಿಸಿದ್ದಾಗಿದೆ. ತನ್ನ ಸೇವೆಯಲ್ಲಿ ಪೌಲನು ಆಪಾದನೆಗಳಿಂದ ತಪ್ಪಿಸಿಕೊಳ್ಳುವಷ್ಟು "ತಂತ್ರಗಾರನು" ಅಥವಾ "ವಂಚಕನೂ" ಆಗಿರಲಿಲ್ಲ. ಈಗಾಗಿ ಆತನು ಕ್ರಿಸ್ತನು ತನ್ನ ನಡತೆಯಲ್ಲಿ ವಿಭಿನ್ನತೆಯನ್ನು ಮಾಡಿದನು ಎಂದು ಆತನು ಪ್ರತಿಪಾದಿಸಿದನು (1:12-14).

ಪೌಲನ ಸಮರ್ಥನೆಯು ಕ್ಷೋಬೆಯ ಪರಿಶೀಲನೆಯಿಂದ ಯಾರೊಬ್ಬನೂ ತಪ್ಪಿಸಿಕೊಳ್ಳಲಾರನು ಎಂಬುದನ್ನು ನೆನಪಿಸಿಕೊಡುತ್ತದೆ. ಆ ಸಮಯದಲ್ಲಿ ಸಭೆಯ ನಾಯಕರ ಮತ್ತು ಇತರ ವಿಧವಾದ ಸೇವೆಯಲ್ಲಿ ತೊಡಗಿಸಿಕೊಂಡಿರುವವರು ತಾವು ತಮ್ಮ ನಡತೆಯಿಂದ ತಾವು ಕ್ರೈಸ್ತರಲ್ಲ ಎಂಬುದನ್ನು ಚಿಹ್ನೆಗಾಗಿ ಆಚರಿಸಬಹುದು. ನಾವು ತೆತ್ತುವ ಬೆಲೆಯು ನಾವು "ಹೊಸ ಸೃಷ್ಟಿಗಳು" ಆಗಿದ್ದು "ಹೊಸದಾದದನ್ನು" ನಮಗೆ ನಾವೇ ಒಪ್ಪಿಕೊಂಡಿರುವಂಥ ಕಾರ್ಯದಲ್ಲಿ ಪ್ರಯೋಗಿಸುವ ಸವಾಲನ್ನು ನಾವು ಒಡ್ಡುವವರಾಗಿದ್ದೇವೆ ಎಂಬ ಪ್ರತಿಪಾದನೆಯನ್ನು ಮಾಡುವವರಾಗಿದ್ದೇವೆ.

## ಕ್ರೈಸ್ತರು ಮತ್ತು ಅವರ ನಿರ್ಧಾರಗಳು

ಪೌಲನ ಪ್ರಾಮಾಣಿಕತೆಯ ಬಗೆಗೆ ಎದ್ದಿರುವ ಸಂಶಯದ ಪ್ರಸಂಗಗಳು ಯಾವಾಗಲೂ ನಮ್ಮಲ್ಲಿ ಕಾಣಿಸಿಕೊಂಡ ವಿಪರ್ಯಾಸದೆಡೆ ನಡೆಸುವಂತದ್ದಾಗಿವೆ. ಪೌಲನು ಕೊರಿಂಥದವರಿಗೆ ಚಳಿಗಾಲದ ಸಮಯದಲ್ಲಾದರೂ ಮೆಕೆದೋನ್ಯ ಸೀಮೆಯ (1:15, 16) ಮೇಲೆ ಪ್ರಯಾಣಿಸುವಾಗ ಒಂದು ಸುದೀರ್ಘವಾದ ಕಾಲವನ್ನು ಅವರೊಡನೆ ಕಳೆಯುವ ವಾಗ್ದಾನವನ್ನು ಮಾಡಿದ್ದನು (1 ಕೊರಿಂಥ 16:5, 6). 1:15, 23ರ ಪ್ರಕಾರ, ಪೌಲನ ಯೋಜನೆಯು ಕಾರ್ಯರೂಪಕ್ಕೆ ಬರಲಿಲ್ಲ. ಹೀಗೆ ಆತನ ಬದಲಿಸುತ್ತಿರುವ ಯೋಜನೆಗಳು ಪೌಲನು ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ "ಸ್ಥಿರಚಿತ್ತವಿಲ್ಲದವನೂ" ಮತ್ತು "ಲೌಕಿಕನೂ" ಆಗಿದ್ದಾನೆ ಎಂಬ ಆಪಾದನೆಯೆಡೆಗೆ ನಡೆಸಿದವು. ಇಂಥ ಘಟನೆಗಳಲ್ಲಿ ತಪ್ಪು ಕಲ್ಪನೆಗಳು ಬೆಳೆದು ಬಿಡುವುದನ್ನು ನಾವು ಕಲ್ಪಿಸಿಕೊಳ್ಳಬಹುದು. ಅವುಗಳು "ಆತನು ತನ್ನ ಹೊಣೆಗಾರಿಕೆಯನ್ನು ನಿಭಾಯಿಸಲಾರನು"; "ನಾವು ಆತನಲ್ಲಿ ಭರವಸವಿಡಲಾರೆವು ಯಾಕೆಂದರೆ ಆತನ ಮಾತುಗಳು ನಂಬಲರ್ಹವಾಗಿಲ್ಲ, ಆತನು ತನ್ನ ವಾಗ್ದಾನಗಳನ್ನು ಯಾವ ಸೂಚನೆಕೊಡದೇ ತನಗೆ ಬೇಕಾದ ಹಾಗೆ ಬದಲಾಯಿಸುವವನಾಗಿದ್ದಾನೆ" ಎಂಬವುಗಳಾಗಿರಬಹುದು ಇಂತಹ ಗಂಭೀರವಾದ ಆಪಾದನೆಗಳು ಒಬ್ಬ ಕ್ರಿಸ್ತನ ದಾಸನ ವಿರುದ್ಧ ಇರುವವುಗಳಾಗಿವೆ.

ಒಬ್ಬನ ನಿಷ್ಟೆ ಮತ್ತು ನಂಬಿಗಸ್ತತನವು ಸಂಶಯದ ಅಡಿಯಲ್ಲಿ ಇದ್ದಾಗ ಆತನು ಯಶಸ್ವಿಯಾಗಿ ಕ್ರಿಸ್ತನ ಸೇವೆಯನ್ನು ಮಾಡಲಾರನು. ಆದುದರಿಂದ, ಪೌಲನು 1:18-20ರಲ್ಲಿ ತನ್ನ ಮಾತುಗಳು ಯೋಗ್ಯವಾದವುಗಳು ಎಂದು ತೋರಿಸಿದನು. "... ನಾನು ನಿಮಗೆ ಹೇಳುವ ಮಾತು ಒಂದು ಸಾರಿ ಹೌದೆಂದು ಒಂದು ಸಾರಿ ಅಲ್ಲವೆಂದೂ ಇರುವುದಿಲ್ಲ" (1:18). ನಂತರ ಆತನು ಕ್ರೈಸ್ತರ ಘೋಷಣೆಯನ್ನು "ಹೌದು ಮತ್ತು ಇಲ್ಲ" ಎಂಬುದರಲ್ಲಿ ಎಂದಿಗೂ ಅಶುದ್ಧನಲ್ಲ ಎಂಬುದನ್ನು ನೆನಪಿಸುತ್ತಾನೆ. ಪ್ರತಿಯೊಂದು ಆರಾಧನಾ ಸೇವೆಯಲ್ಲಿ, ಸಭೆಯು "ಆಮೆನ್" ಎಂದು ಹೇಳುವಲ್ಲಿಯೇ ದೇವರಿಗೆ "ಹೌದು" ಎಂಬುದನ್ನು ನೆನಪಿಗೆ ತರುವದಾಗಿದೆ. ವಾಸ್ತವವಾಗಿ, ಪೌಲನು ಎಲ್ಲಾ ವೇದಭಾಗಗಳನ್ನು ದೇವರ ವಾಗ್ದಾನದ ಅದಿಪತ್ಯದ ಅಡಿಯಲ್ಲಿ ಸೇರಿಸುತ್ತಿದ್ದಾನೆ. ಯೇಸು ಕ್ರಿಸ್ತನಲ್ಲಿ ದೇವರ ವಾಕ್ಯವು "ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವುದಿಲ್ಲ" ಮತ್ತು ಅದು "ನನ್ನ ಇಷ್ಟಾರ್ಥವನ್ನು ನೆರವೇರಿಸುವದು" (ಯೆಶಾಯ 55:11) ಎಂದು ಸಭೆಯು ಬಲ್ಲದ್ದಾಗಿದೆ.

ದೇವರ ವಾಕ್ಯದಲ್ಲಿ ಆತನ ನಂಬಿಗಸ್ತನ ಎಂಬ ಚಿಕ್ಕ ನಿಬಂಧನೆ (1:20), ಒಂದೇ ಅವಲೋಕನದಲ್ಲಿ ಪೌಲನ ಸಮರ್ಥನೆಯ ಅಂಚನ್ನು ಮೀರಿದ ಆತನ ನಡತೆಯು ಕಂಡುಬರುತ್ತದೆ. ಆದರೆ ತನ್ನ ನಡತೆಯು ತನ್ನ ಮಾತುಗಳನ್ನು ನಡೆಸುವ ದೇವರ ಜೊತೆ ಸ್ಥಿರವಾದುದ್ದು ಆಗಿದೆ ಎಂಬ ಸಂಗತಿಯನ್ನು ಪ್ರಾಯೋಜಿಸುವದು ಪೌಲನಿಗೆ ಮುಖ್ಯವಾಗಿ ಪ್ರಾಮುಖ್ಯತೆಯನ್ನು ಪಡೆದಿತ್ತು. ದೇವರ ಸ್ವಭಾವ ಮತ್ತು ಅಧಿಕೃತ ಸೇವಕನ ಗುಣಲಕ್ಷಣಗಳ ಮಧ್ಯೆ ಅಲ್ಲೊಂದು ಕೊಂಡಿಯು ಇದೆ.

ಕ್ರೈಸ್ತನ ಗುರುತು ಏನು? ಪೌಲನ ಪ್ರಕಾರ ಒಂದು ಪರೀಕ್ಷೆಯು ಒಬ್ಬನು ತನ್ನ ಮಾತಿನ ಪ್ರಕಾರ ನಡೆಯುವದು ಮತ್ತು ಇತರರ ಬಗೆಗೆ ಹೊಣೆಗಾರಿಕೆಯಿಂದಿರುವದೇ ಆಗಿದೆ. ಕ್ರಿಸ್ತನ ನಿಜಸೇವಕನು ದೇವರ ವಾಕ್ಯದಲ್ಲಿರುವ ಯೇಸು ಕ್ರಿಸ್ತನಲ್ಲಿ ಆತನ ನಂಬಿಗಸ್ತಿಕೆಯನ್ನು ಮಾತ್ರ ಪ್ರಕಟಿಸುವುದಿಲ್ಲ. ಕ್ರೈಸ್ತನ ಗುರುತು ಸಾಕಾರಗೊಳಿಸುವದು, ನಿಷ್ಠೆಯನ್ನು ಇತರರಿಗೆ ಪ್ರಕಟಗೊಳಿಸುವ ಜೀವನಶೈಲಿಯನ್ನು ಒಳಗೊಂಡಿದೆ.

ಅಧಿಕೃತತೆಯ ಪರೀಕ್ಷೆಯು ನಮ್ಮ ಸಂಸ್ಕೃತಿಯಲ್ಲಿ ಹೆಚ್ಚಾಗಿ ಪ್ರಶಂಶಿಸಲ್ಪಡುವುದಿಲ್ಲ ಅದು ನಮ್ಮ ಸಮಾಜದಲ್ಲಿ ಅತೀ ಕಡಿಮೆ ಮಟ್ಟದಲ್ಲಿರುವ ಪ್ರಾಶಸ್ತ್ಯವನ್ನು ಹೊಂದಿದೆ. ನಮ್ಮ ಕಾಲದ ಪ್ರಚಾರವು "ನಮ್ಮ ಆಯ್ಕೆಗಳನ್ನು ತೆರೆದಿಡಿ" ಎಂದು ಹೇಳುವುದಾಗಿದೆ ಮತ್ತು ಅಪರಿಮಿತವಾಗಿ, ಸರಿಪಡಿಸಿಕೊಳ್ಳಲು ಯೋಗ್ಯವಾದದ್ದು ಆಗಿದೆ. "ನಮ್ಮ ಆಯ್ಕೆಗಳನ್ನು ತೆರೆದಿಡುತ್ತಾ ಇರುವದು" ನಮ್ಮ ವೈಯಕ್ತಿಕವಾದ ಅನುಕೂಲವಿಲ್ಲದ ವಚನಬದ್ಧತೆಯನ್ನು ಒಪ್ಪಿಕೊಳ್ಳಲು ನಿರಾಕರಿಸುವುದನ್ನು ಒಳಗೊಂಡಿದ್ದು ಆಗಿದೆ. ಒಬ್ಬನು ಸಂಗಾತಿಯ ಜೊತೆ ಅನಿಷ್ಚಿತತೆಯಿಂದಿರುವುದಕ್ಕೆ ಒಪ್ಪಿಕೊಳ್ಳುವದು ಕೂಡಾ ಅಸಾಧ್ಯವಾಗುತ್ತದೆ, ಅಂಥ ಒಪ್ಪಿಕೊಳ್ಳುವಿಕೆಗಳು ವೈಯಕ್ತಿಕ ಸ್ವಾತಂತ್ರ್ಯದ ಜೊತೆ ಮಧ್ಯಪ್ರವೇಶಿಸುತ್ತವೆ ಎಂದು ನಮ್ಮ ಕಾಲದ ಪ್ರಚಾರವು ಸೂಚಿಸುವುದಾಗಿದೆ. ಪಕ್ಕದ ಗೆರೆಯ ಮೇಲೆ ನಿಂತುಕೊಳ್ಳುವ ಸಂಸ್ಕೃತಿಯಲ್ಲಿ ನಾವಿದ್ದು, ಯಾವಾಗಲೂ ನಮ್ಮನ್ನು ಸಮೃದ್ಧಿಗೊಳಿಸುವ ಆಯ್ಕೆಗಳನ್ನೇ ಹಿಂಬಾಲಿಸಲು ಸದಾ ಸಿದ್ಧರಾಗಿರುತ್ತೇವೆ.

"ಲೌಕೀಕ" ದೃಷ್ಟಿಕೋನವು ನಿಶ್ಚಿತವಾಗಿ ಸಭೆಗೆ ಶೋಧನೆಯಾಗಿದೆ. ಸಮಸ್ಯೆಗಳನ್ನು ಹೊಂದಿರುವ ಸಭೆಗೆ ನಿಷ್ಠೆಯನ್ನು ಇರಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಒಪ್ಪಿ ಕೊಳ್ಳುವಿಕೆಯ ನೋವನ್ನು ಹಂಚಿಕೊಳ್ಳಲು ಯಾರನ್ನು ಆರಿಸಿಕೊಳ್ಳುತ್ತೇವೆಯೋ ಅವರು ತಮ್ಮ ನಿಯಂತ್ರಣವನ್ನು ಮೀರಿ ಇರುವವರ ಸಮುದಾಯದ ಸಮಸ್ಯೆಗಳಿಗೆ ಮಾನಸಿಕವಾಗಿ ಮತ್ತು ದೈಹೀಕವಾಗಿ ಉನ್ನತಮಟ್ಟದ ಬೆಲೆಯನ್ನೇ ಎತ್ತಬೇಕಾಗುವದು. ಉದಾಹರಣೆಗಾಗಿ, ನೆರೆ ಹೊರೆಯವರ ಬದಲಾಗುತ್ತಿರುವ ವ್ಯಕ್ತಿತ್ವ ಅಥವಾ ಪಟ್ಟಣವು ನಿಶ್ಚಯವಾಗಿ ಸಭೆಯನ್ನು ಅಬೇಧ್ಯವಾಗಿ ಬಿಟ್ಟು ಬಿಡುವದು ಆಗಿದೆ. ಸಭೆಯು ತೊಂದರೆಪಡಬೇಕಾಗುವುದಕ್ಕೆ ಕಾರಣ ಹಿಂದೆ ಮಾಡಿದಂತಹ ತಪ್ಪಾದ ನಿರ್ಧಾರಗಳೇ ಆಗಿವೆ. ನಾವು ನಮ್ಮನ್ನು ಪುನರ್ಘಟಿಸುವ ನಿರ್ಧಾರಗಳ ವಿಧಗಳ ಜೊತೆ ಕೂಡ ಅಸಂತುಷ್ಟಿಯಿಂದಿರುವಂತ್ತದ್ದು ಕ್ಷೀಣವಾದ ನಾಯಕತ್ವದಂತೆ ಕಾಣುತ್ತದೆ. "ಮಾನವ ದೃಷ್ಟಿಕೋನದಿಂದ" ಯೋಗ್ಯವಾದ ಪ್ರತಿಕ್ರಿಯೆಯು "ಆಯ್ಕೆಗಳನ್ನು ತೆರೆದಿಡುವದು" ಆಗಿದ್ದು ಮತ್ತು ಸಮುದಾಯದ ಸಮಸ್ಯೆಯ ಜೊತೆ ಒಳಗೊಂಡಿರುವದರ ಜೊತೆ ಹೋರಾಡುವದೂ ಆಗಿದೆ.

ಇತರರು ಪೌಲನನ್ನು ಸ್ಥಿರತೆಯಿಲ್ಲದಿರುವವನು ಎಂದು ಜರೆದಾಗ, ಅದು ಸುವಾರ್ತೆಯ ಜೊತೆ ಆತನ ನಡತೆಯು ಸುಸಂಬದ್ಧವಾಗಿತ್ತು ಎಂದು ಸೂಚಿಸುವವನಾಗಿದ್ದಾನೆ. ಗಂಭೀರ ವಾಗಿ ಪರಿಗಣಿಸಲು ತಿಳಿದವನಾಗಿರುತ್ತಾನೆ. ಆತನ ಯೋಜನೆಗಳಲ್ಲಿ ಬದಲಾವಣೆಯನ್ನು ಪರಿಸ್ಥಿತಿಗಳು ಬಯಸಿದ್ದಾದರೂ ಕೂಡಾ, ಆತನ ಚಲನೆಗಳು ವ್ಯಕ್ತಿಕ ವಿಚಿತ್ರದಿಂದ ವಿಧಿಸಲ್ಪಡುವುದಿಲ್ಲ. ಪೌಲನಿಗೋಸ್ಕರ ಅಲ್ಲೊಂದು ವೈಯಕ್ತಿಕ ಲಕ್ಷಣವು ಸುವಾರ್ತೆಯ ಕಥೆಯಿಂದ ಸಂಸ್ಥಾಪಿಸಲ್ಪಟ್ಟಿದೆ.

ಅಧಿಕೃತ ಶಿಷ್ಯತ್ವವು ಕೇವಲ ಒಳ್ಳೇಯ ಸಂಗತಿಗಳನ್ನು ಮಾತ್ರ ಹೇಳುವುದಿಲ್ಲ ಎಂದು ಪೌಲನ ಸಮರ್ಥನೆ ಸೂಚಿಸುವುದಾಗಿದೆ. ಹೇಳದ ಕಥೆಯು, ನಮ್ಮ ಸಂದೇಶವು ಸುಸಂಬದ್ಧವಾಗಿರುವ ನಡತೆಯನ್ನೂ ಕೂಡಾ ಇದು ಒಳಗೊಂಡಿರುತ್ತದೆ. ಮಾನಸಿಕ ಆಸ್ಪತ್ರೆಯಿಂದ ತಪ್ಪಿಸಿಕೊಂಡಿದ್ದ ಒಬ್ಬ ಮನುಷ್ಯನು ಮುಂದಿನ ಊರಿನ ಜನರಿಂದ ಹುಚ್ಚನೆಂದು ಗುರುತಿಸಲ್ಪಡುತ್ತ ಇರುವ ನೈಜ ಪ್ರತಿಕ್ಷೆಯನ್ನು ಎದರಿಸಿದ ಮತ್ತು ತನ್ನ ಸಂಸ್ಥೆಗೆ ಹಿಂದಿರುಗಿದ ಒಂದು ಕಥೆಯನ್ನು ಅವರು ಹೇಳಿದರು. ಆತನು ತನ್ನ ಮನವಿಕಲ್ಪತೆಯನ್ನು ಮೈಮಾಚಿಕೊಂಡು ಜೋರಾಗಿ ಉದ್ಘರಿಸುವ ಮೂಲಕ ಕೆಲವರು ಸಾಮಾನ್ಯವಾಗಿ ಕೇಳುವವರಿಗೆಲ್ಲ ತಾನು ಸ್ವಸ್ಥಬುದ್ಧಿಯವನು ಎಂಬ ಸತ್ಯವನ್ನು ಸಾಧಿಸಿ ತೋರಿಸಲು ನಿರ್ಧರಿಸಿದನು. ಆತನು ಬೀದಿಯೊಳಗೆ ನಡೆಯುತ್ತಾ, ಅಲ್ಲಿ ಹಾದುಹೋಗುತ್ತಿರುವವರಿಗೆಲ್ಲ "ಭೂಮಿ ಗುಂಡಾಗಿದೆ, ಭೂಮಿ ಗುಂಡಾಗಿದೆ" ಎಂದು ಹೇಳತೊಡಗಿದನು. ಇನ್ನು ಹೇಳುವುದು ಬೇಕಾಗಿಯೇ ಇಲ್ಲ, ಆತನು ಗುರುತಿಸಲ್ಪಟ್ಟನು ಮತ್ತು ಹುಚ್ಚಾಸ್ಪತ್ರೆ ತಿರುಗಿ ಸೇರಿಸಲ್ಪಟ್ಟನು. ಸತ್ಯವನ್ನು ಹೇಳಲು ಇದಷ್ಟೇ ಸಾಕಾಯಿತು ಎಂದು ಈ ಕಥೆಯ ಕಥೆಗಾರನು ಹೇಳುತ್ತಾನೆ. ಯಾರ ಜೀವಿತವು ಸತ್ಯದಿಂದ ಪ್ರಭಾವಿತವಾಗಿಲ್ಲವೋ ಅಂಥವರ ಬಾಯಲ್ಲಿನ ಸತ್ಯದ ಬಗೆಗೆ ಮಾತನಾಡುವದು ಅಸಂಬದ್ಧತೆಯ ಮಾತಾಗಿರುತ್ತದೆ.[1]

ನಿಜ ಕ್ರೈಸ್ತನು ಕಥೆಯಿಂದ ರೂಪಿಸಲ್ಪಟ್ಟವನಾಗಿರುತ್ತಾನೆ. ನಾವು ಕ್ರಿಸ್ತನನ್ನು ಪ್ರಸಂಗಿಸುವವರಾಗಿರುತ್ತೇವೆ, ನಮಗೋಸ್ಕರ ಅಲ್ಲ, ನಮ್ಮ ಘೋಷಣೆಯಲ್ಲಿ ಮತ್ತು ಬೋಧನೆಯಲ್ಲಿ "ನಾನು" ಎಂಬ ಪದವು ಇರುವುದಾಗಿದೆ. 2 ಕೊರಿಂಥದಲ್ಲಿನ "ನಾನು" ಎಂಬ ಪದದ ಪುನರಾವರ್ತನೆಯ ಸೇವಕನು ಸಮಜಾಯಿಸಲ್ಪಟ್ಟಾಗ ಮಾತ್ರ ಸುವಾರ್ತೆಯು ಸಮಜಾಯಿಸಲ್ಪಡುತ್ತದೆ ಎಂದು ನೆನಪಿಸುವಂತದ್ದಾಗಿದೆ.

ಪೌಲನ ವಿರುದ್ಧವಿರುವ ಆಪಾದನೆ ಎಂದರೆ ಆತನು "ಶರೀರಸ್ವಭಾವದವನು" (ಮಾನುಷ) ಅಕ್ಷರಶಃ "ಮಾನವನ ಮಾಂಸದಿಂದ ಮನುಷ್ಯನು" (1:12), ತನ್ನ ವಾಕ್ಯ ವನ್ನು ಇಟ್ಟುಕೊಂಡ ದೇವರು ಆತನಿಗೆ ಎರಡನ್ನೂ ನಿಯೋಜಿಸಿದನು (1:21) ಮತ್ತು ಅದನ್ನು ಸ್ಥಿರಪಡಿಸುವುದಕ್ಕೋಸ್ಕರ ಸಭೆಗೆ ಆತ್ಮನನ್ನು ಕೊಟ್ಟನು ಎಂಬುದನ್ನು ಪೌಲನು ತನ್ನ ಓದುಗರಿಗೆ ನೆನಪಿಸುವವನಾಗಿದ್ದಾನೆ (1:22; ಹೋಲಿಸಿ 5:5; ಎಫೆಸ 1:14). ದೇವರ ಸ್ಥಿರತೆಯು ಆತನ ಸ್ಥಿರತೆಯನ್ನು ನೆನಿಪಿಸುವುದಕ್ಕೋಸ್ಕರ ಆತ್ಮನ ಮೂಲಕ ಸಭೆಯಲ್ಲಿ ಅಸ್ತಿತ್ವದಲ್ಲಿದೆ.

## "ವಿಶೇಷವಾಗಿ ನಿನಗಾಗಿ ಇರುವಂಥ ಪ್ರೀತಿ"

ಪೌಲನು ತನ್ನ ಮಾತುಗಳನ್ನು ಯಾಕೆ ಕಾದುಕೊಳ್ಳಲಿಲ್ಲ ಮತ್ತು ಹೀಗೆ ಆತನು ತನ್ನ ಉದ್ದೇಶಗಳನ್ನು ಪುನರ್ ಪರಿಶೀಲನೆಗೆ ಯಾಕೆ ಇಡಲಿಲ್ಲ? ಅದಕ್ಕೆ ಆತನು 1:23ರಲ್ಲಿ ಸ್ಪಷ್ಟ ಉತ್ತರವನ್ನು ಕೊಡುವಾಗ ಹೀಗೆ ಹೇಳುತ್ತಾನೆ. "... ಕೊರಿಂಥಕ್ಕೆ ಬರಬೇಕೆಂಬ ಅಭಿಪ್ರಾಯವನ್ನು ಬಿಟ್ಟುಬಿಟ್ಟೆನೆಂದು ... ಹೇಳುತ್ತೇನೆ" ಆತನು ನಂತರದಲ್ಲಿ ಕೊರಿಂಥದ ಸಭೆಯೊಂದಿಗಿನ ಇಲ್ಲೊಂದೆಡೆ ಮತ್ತೇ ಉಲ್ಲೇಖಿತವಾಗಿರುವ ಉಗ್ರವಾದ ಸಂಬಂಧದ ಬಗೆಗೆ ಹೇಳುತ್ತಾನೆ. 1:3-2:13ರಲ್ಲಿ ಪ್ರಾಯೋಗಿತವಾಗಿರುವಂತೆ, ಕೊರಿಂಥದ ಸಭೆಯು ಪೌಲನ ದುಃಖಕ್ಕೆ ಕಾರಣವಾಗಿತ್ತು. ಒಂದು ಸಂದರ್ಭದಲ್ಲಿ ಪೌಲನು ತ್ರಾಸದಾಯಕ ಭೇಟಿಯನ್ನು ಮಾಡಿದನು (2:1) ಅದು ಒಬ್ಬರಿಂದ ತೆರೆಯ ಮೇಲಿನ ತಿರುಗಿಬೀಳುವಿಕೆಯ ಜೊತೆ ಕೆಲಸಮಾಡುವದು ಆಗಿದ್ದು ಆ ದೊಡ್ಡ ನೋವಿಗೆ ಕಾರಣವಾಯಿತು (2:5). ನಂತರದಲ್ಲಿ ಆತನು "ಹೃದಯದ ಸಂಕಟದಿಂದಲೂ ವ್ಯಾಕುಲದಿಂದಲೂ" ಎಂದು ಪತ್ರದಲ್ಲಿ ಬರೆದನು (2:4). ಮುಂದಿನ ಸಂದರ್ಭದಲ್ಲಿ ಪೌಲನು ತೀತನನ್ನು ಭೇಟಿಯಾಗುವ ನಿರೀಕ್ಷೆಯಿಂದ ತ್ರೋವಕ್ಕೆ ಹೋದನು. ಯಶಸ್ವಿ ಸೇವಾಕ್ರಮದ ಮಧ್ಯದಲ್ಲಿರುವಾಗಲೂ ಕೂಡಾ (2:13). "ನನ್ನ

ಸಹೋದರನಾದ ತೀತನು ನನಗೆ ಸಿಕ್ಕಲಿಲ್ಲವಾದ ಕಾರಣ ನನ್ನ ಆತ್ಮಕ್ಕೆ ಉಪಶಮನವಿಲ್ಲದೆ ..." 2:13ರಲ್ಲಿ ಪೌಲನಿಂದ ಹೇಳಲ್ಪಟ್ಟ ಕಾಳಜಿಯ ವಿಸ್ತರತೆಯು ಇದೆ. ಒಂದು ಅವಿಧೇಯ ಸಭೆಗೋಸ್ಕರ ಯಶಸ್ವಿಯುತ ಸೇವೆಗಾಗಿ ಆತನು ಅಪಾಯವನ್ನು ತಂದುಕೊಂಡನು.

ಮಾನವನ ದೃಷ್ಟಿಯಿಂದ, ಪೌಲನ ಮೌಲ್ಯಗಳು, ತೊಂದರೆಗೆ ಒಳಗಾದ ಸಭೆಯೊಡನೆ ಭಾವನಾತ್ಮಕತೆಯನ್ನು ಹೊಂದಿರುವುದನ್ನು ಒಳಗೊಂಡಿರುವದು ವಿಚಿತ್ರವಾಗಿ ಕಾಣುತ್ತದೆ. ವಿವಾದಾತ್ಮಕ ಮತ್ತು ಕೃತಜ್ಞವಾದ ಸಭೆಯ ಜೊತೆಗಿನ ಆತನ ವ್ಯವಹಾರಗಳು ಬಲು ಯಶಸ್ವಿಯುತವಾಗುವ ಸಾಧ್ಯತೆಯನ್ನು ಕೊಡುವ ಆತನ ಇಚ್ಛೆಯನ್ನು ನಾವು ಸರಳವಾಗಿ ಅರ್ಥೈಸಿಕೊಳ್ಳಲಾರೆವು. ಆದರೆ ನಂತರದಲ್ಲಿ "... ಎಲ್ಲಾ ಸಭೆಗಳ ವಿಷಯವಾದ ಚಿಂತೆಯು ದಿನೆದಿನೆ ನನ್ನನ್ನು ಪೀಡಿಸುತ್ತದೆ" (11:28), ಎಂಬ ಪೌಲನು ಹೇಳುವಲ್ಲಿ ಆತನು ಅಲುಗಾಡಿಸಲ್ಪಟ್ಟಿದ್ದನು. ಪೌಲನಿಗೋಸ್ಕರದ ಕ್ರೈಸ್ತನ ಗುರುತು ಸಭೆಗೋಸ್ಕರದ ಒತ್ತಡಗಳನ್ನು ಅಂಗೀಕರಿಸುವುದೇ ಆಗಿದೆ ಎಂದು ಪ್ರಚಲಿತವಾದ ಭಾಷೆಯಲ್ಲಿ ನಾವು ಹೇಳಬಹುದು.

ಪೌಲನ ಎಲ್ಲಾ ಸಭೆಗೋಸ್ಕರದ ಕಾಳಜಿಯು ಮತ್ತು ಆತನ ನಿರಂತರರವಾದ ಒತ್ತಡವು "ಮಾನವನ ದೃಷ್ಟಿಯಲ್ಲಿ" ಎಣಿಕೆಯಾಗುವಂತಹ ಸ್ವಾರ್ಥತೆಯನ್ನು ಸೂಚಿಸುವುದಾಗಿದೆ. ಆತನ ಕಾರ್ಯಗಳು ಇತರರಿಗೋಸ್ಕರ ಕಾಳಜಿಯನ್ನು ತೋರಿಸುವುದಕ್ಕೋಸ್ಕರ ಮಾತ್ರ ನಿರ್ವಹಿಸಲ್ಪಡುತ್ತಿದ್ದವು ಎಂಬುದನ್ನು ಪ್ರಾಯೋಜಿಸುವುದಾಗಿದೆ. "ನಿಮಗೋಸ್ಕರ ..." ಎಂದು ಒತ್ತಿ ಹೇಳುತ್ತದೆ (1:23). ಆತನು ತನ್ನ "ಪ್ರೀತಿ"ಯನ್ನು (2:4) ತೋರಿಸುವ ನಿಟ್ಟಿನಲ್ಲಿ ಆತನು ತನ್ನ ಅವಿಧೇಯವಾದ ಸಭೆಗೆ ಹೇಳುತ್ತಿದ್ದಾನೆ. ಈ ನಿರ್ಧಿಷ್ಟವಾದ ಸಭೆಯನ್ನು ಪ್ರೀತಿಸುವದು ಸರಳವಾಗಿರಲಿಲ್ಲ.

ನಾವು ಯಾವಾಗಲೂ ಒತ್ತಡಗಳ ಪರಿಸ್ಥಿತಿಗಳಿಂದ ದೂರವಿರುವುದನ್ನು ಮಾತನಾಡುವವ ರಾಗಿದ್ದೇವೆ. ಸೇವಕರು ಮತ್ತು ಇತರರು ಸಭೆಯ ಸಮಸ್ಯೆಗಳನ್ನು ತಮ್ಮೊಂದಿಗೆ ಮನೆಗೆ ತೆಗೆದುಕೊಂಡು ಹೋಗುವುದಿಲ್ಲ ಎಂದು ಕೆಲವರು ಹೇಳುತ್ತಾರೆ. ಆದರೆ ಕ್ರೈಸ್ತರ ಗುರುತು ಇತರರಿಗೋಸ್ಕರ ಅನುಕೂಲವಿಲ್ಲದ ಕಾಲದಲ್ಲಿಯೂ ಕೂಡಾ ಬಾಧೆಪಡಲು ಸನ್ನದರಾ ಗುವುದೇ ಆಗಿದೆ. ಇದು ಅನುಚಿತ ಸಮಯದಲ್ಲಿ ಬರುವ ದೂರವಾಣಿ ಕರೆಗಳೂ ಮತ್ತು ನಮ್ಮ ಯೋಜನೆಗಳ ಮಧ್ಯದಲ್ಲಿ ಬರುವ ಕೂಟಗಳಾಗಲೀ ಆಗಿರಬಹುದು. ಇತರರಿಗಾಗಿ ನಮ್ಮನ್ನು ಬರಿದುಮಾಡಿಕೊಳ್ಳುವ ಮನಸ್ಸೂ ಇದರಲ್ಲಿ ಒಳಗೊಂಡಿದೆ. ನಮ್ಮ ಕಾರ್ಯಕ್ಕೋಸ್ಕರದ ಮಾದರಿಯು ತಾನು ಬಯಸಿದಾಗ "ತೊಂದರೆ ಮಾಡಬೇಡ" ಎಂಬ ಸೂಚನಾ ಫಲಕವನ್ನು ಬಾಗಿಲ ಮೇಲೆ ಇರಿಸಿಕೊಳ್ಳುವ ವ್ಯವಸ್ಥಾಪಕನಾಗಿರಲಾರದು; ಇದು "ಇತರರಿಗಾಗಿ ಇರುವ ಮನುಷ್ಯ" ಆಗಿದ್ದು ಅನೇಕರಿಗೋಸ್ಕರ ತನ್ನ ಜೀವಿತವನ್ನು ಕೊಡುವವನೇ ಆಗಿದ್ದಾನೆ.

ಪೌಲನ ಮಾದರಿಯು ಒಬ್ಬನು ಇತರಿಗೋಸ್ಕರ ತನ್ನನ್ನು ಕೊಡುವುದೇ ಆಗಿದೆ. ಸಭೆಯೊಂದಿಗೆ ದುಃಖಪಡುವುದರ ಮೂಲಕ, ಆತನು ತನ್ನ ಜೀವಿತದ ಮೇಲೆ ಶಿಲುಬೆಯ ಪರಿಣಾಮವನ್ನು ಪ್ರಯೋಗಿಸಿದ್ದಾನೆ. "ಎಲ್ಲರಿಗೋಸ್ಕರ ಒಬ್ಬನು ಸತ್ತನು" (5:14). ಇದರ ಅರ್ಥವು ಆತನಿಗಾಗಿ ಎಲ್ಲರೂ ಜೀವಿಸಬೇಕು ಎಂಬುದೇ (5:15).

## ಮುಕ್ತಾಯ

ಕ್ರೈಸ್ತನ ಗುರುತೇನು? ಪೌಲನಿಗಾಗಿ, ಆತನು ಈ ಕಥೆಯಿಂದ ರೂಪಿಸಲ್ಪಟ್ಟನು ಎಂಬುದನ್ನು ತೋರಿಸುವಂತಹ ಜೀವಿತವಾಗಿದೆ. "ದಾಖಲೆಗಳನ್ನು ನೋಡಿರಿ" ಎಂದು ಹೇಳು ವಂತೆ ಕಾಣುವ "ಇದು ಚಿಲ್ಲರೆ ವ್ಯಾಪಾರಿಗಳ ದಾಖಲೆಯ ಕಥೆಯಂತೆ ಇದಾಗಿರಬಹುದು" "ನನ್ನ ವೈಯಕ್ತಿಕ ಕಥೆಯತ್ತ ಗಮನಹರಿಸಿರಿ, ಮತ್ತು ಇದು ಕಥೆಯನ್ನು ದೃಢಿಕರಿಸುವುದೇನೋ ನೋಡಿರಿ." ಈ ಪ್ರತಿಕ್ರಿಯೆಯು ಕ್ರೈಸ್ತನ ಅಂತ್ಯದ ಗುರುತಾಗಿದೆ.

ನಮ್ಮ ಸ್ವಂತದ ಸೇವೆಯಲ್ಲಿ, ನಾವು ದಾಖಲೆಗಳನ್ನು ಧರ್ಮಗ್ರಂಥಗಳಿಂದ ಸೂಚಿಸಲೇ

ಬೇಕು. ಈ ದಾಖಲೆಗಳು ನಮ್ಮ ಹೊಣೆಗಳಿಗೆ ಸಾಕ್ಷಿಯಾಗಿರುತ್ತವೆ. ಒಂದು ವೇಳೆ ವಿಷಯಗಳ ಸಂದೇಶದಂತೆ ಸಂದೇಶವಾಹಕನೂ ಆಗಿದ್ದರೆ, ತಾನು ಘೋಷಿಸಿದ ಸಂದೇಶದಿಂದ ಆತನು ರೂಪಿಸಲ್ಪಟ್ಟಿದ್ದಾನೆ. ಸಂದೇಶವಾಹಕನ ನಡತೆಯು ಇದನ್ನು ತೋರಿಸುವುದಾಗಿದೆ.

---

**ಟಿಪ್ಪಣಿ**

[1]Sören Kierkegaard, *Concluding Unscientific Postscript*, trans. David Swenson and Walter Lowrie (Princeton: Princeton University Press, 1941), 159; quoted in Fred Craddock, *Overhearing the Gospel* (Nashville: Abingdon, 1978), 50.